03	ಡಾ ಬಿ ಆರ್ ಅಂಬೇಡ್ಕರ್/ ಡಾ.ಬಾಬು ಜಗಜೀವನರಾಂ/ ಸಮುದಾಯ ಭವನಗಳ ನಿರ್ಮಾಣ	11707 12	666	09
04	ಪರಿಶಿಷ್ಟ ಜಾತಿಯ ಕಾಲೋನಿಗಳಲ್ಲಿ ಮೂಲಭೂತ ಸೌಲಭ್ಯ ಒದಗಿಸಲು	21265 65	3406	1912

ಇ) ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ಮಾಣ, ದುರಸ್ತಿ, ಡಾ. ಬಿ.ಆರ್. ಅಂಬೇಡ್ಕರ್/ಡಾ ಬಾಬು ಜಗಜೀವನರಾಂ/ಸಮುದಾಯ ಭವನಗಳ ನಿರ್ಮಾಣ ಮತ್ತು ಪರಿಶಿಷ್ಟ ಜಾತಿ ಕಾಲೋನಿಗಳ ಅಭಿವೃದ್ಧಿಯ ಬಾಕಿ ಕಾಮಗಾರಿಗಳು ಪ್ರಗತಿಯಲ್ಲಿದ್ದು ಶೀಘ್ರವಾಗಿ ಪೂರ್ಣಗೊಳಿಸಲು ಕ್ರಮವಹಿಸಲಾಗುವುದು.

ಬಸ್ ಘಟಕ ಸ್ಥಾಪನೆ

449(917); ಶ್ರೀ ಅಪ್ಪಾಜಿ @ ಚನ್ನಬಸವರಾಜ್ ಶಂಕರರಾವ್ ನಾಡಗೌಡ

ಅ) ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ಬಸ್ ಘಟಕ, ತಾಳಿಕೋಟೆ ಬಸ್ ಘಟಕ, ಬಸವನಬಾಗೇವಾಡಿ ಬಸ್ ಘಟಕಗಳಿಗೆ ಮುದ್ದೇಬಿಹಾಳದಲ್ಲಿ ವಿಭಾಗಿಯ ಕಛೇರಿಯನ್ನು ಸ್ಥಾಪಿಸುವ ಉದ್ದೇಶ ಸರ್ಕಾರದ ಮುಂದಿದೆಯೆ;

ಆ) ಮುದ್ದೇಬಿಹಾಳದಲ್ಲಿ ವಿಭಾಗೀಯ ಕಛೇರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು;

ಇ) ಕಛೇರಿ ಸ್ಥಾಪಿಸುವುದರಿಂದ ಸಾರ್ವಜನಿಕರಿಗೆ ಅನುಕೂಲವಾಗುವ ವಿಚಾರ ಮತ್ತು ಈಶಾನ್ಯ ವಲಯಕ್ಕೆ ಲಾಭದಾಯಕವಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಶ್ರೀ ರಾಮಲಿಂಗಾರೆಡ್ಡಿ (ಮಾನ್ಯ ಸಾರಿಗೆ ಸಚಿವರು)

ಅ) ಇಲ್ಲ.

ಆ) **ಮತ್ತು** ಇ) ಪ್ರಸ್ತುತ ಬಿಜಾಪುರದಲ್ಲಿರುವ ವಿಭಾಗೀಯ ಕಛೇರಿ ಆಡಳಿತ ವ್ಯಾಪ್ತಿಗೆ ಬರುವ ಮುದ್ದೇಬಿಹಾಳ ಘಟಕವು ಸೇರಿದಂತೆ, ಉಳಿದ ಎಲ್ಲ ಘಟಕಗಳಿಗೆ ಬಿಜಾಪೂರ ಕೇಂದ್ರ ಸ್ಥಾನವಾಗಿರುತ್ತದೆ. ಇದರಿಂದ ಎಲ್ಲ ಘಟಕಗಳ ಆಡಳಿತ ವ್ಯವಸ್ಥೆ ನೋಡಿಕೊಳ್ಳಲು ಮತ್ತು ಸಾರ್ವಜನಿಕರಿಗೆ ಹಾಲಿ ಬಿಜಾಪುರ ವಿಭಾಗೀಯ ಕಛೇರಿ ಅತ್ಯಂತ ಸೂಕ್ತವಾಗಿರುವುದೆ.

ಪ್ರಸ್ತುತ ಬಿಜಾಪುರ ವಿಭಾಗದ ಆಡಳಿತ ವ್ಯಾಪ್ತಿಯಲ್ಲಿ 7 ಬಸ್ ಘಟಕಗಳು ಬರುತ್ತಿದ್ದು, ಸದರಿ ವಿಭಾಗವನ್ನು ವಿಂಗಡಿಸಿ ಮುದ್ದೇಬಿಹಾಳ ಪಟ್ಟಣದಲ್ಲಿ ನೂತನ ವಿಭಾಗೀಯ ಕಛೇರಿ ಪ್ರಾರಂಭಿಸುವ ಪ್ರಸ್ತಾವನೆ ಲಾಭದಾಯಕವಾಗಿರುವುದಿಲ್ಲ

ಪ್ರಾಥಮಿಕ ಆರೋಗ್ಯ ಕೇಂದ್ರಗಳು

451(909); ಶ್ರೀ ಅಶೋಕ ಖೇಣಿ (ಬೀದರ ದಕ್ಷಿಣ)

ಅ) ಬೀದರ ದಕ್ಷಿಣ ವಿಧಾನ ಸಭಾ ಕ್ಷೇತ್ರದಲ್ಲಿ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ;

ಆ) ಹೊಸದಾಗಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ,

ಇ) ಇತ್ತೀಚೆಗೆ ಬೀದರ ದಕ್ಷಿಣ ಕ್ಷೇತ್ರದಲ್ಲಿ ಕಾಲರಾದಿಂದ ಸತ್ತಪಟ್ಟ ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿದೆಯೇ,

ಈ) ಹಾಗಿದ್ದಲ್ಲಿ, ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಯು ಟಿ ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಬೀದರ ದಕ್ಷಿಣ ವಿಧಾನ ಸಭಾ ಕ್ಷೇತ್ರದಲ್ಲಿ 8 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ